ಕಸ ವಿಲೇವಾರಿ

1637; ಶ್ರೀ ಅಶೋಕ. ಆರ್

ಅ) ಬೆಂಗಳೂರು ನಗರದಲ್ಲಿ ಕಸ ವಿಲೇವಾರಿಯಾಗದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತ್ಯಾಜ್ಯ ರಾಶಿಯಿಂದ ಸಾರ್ವಜನಿಕರ ಆರೋಗ್ಯ ಕೆಡುತ್ತಿರುವ ಬಗ್ಗೆ ದೂರುಗಳು ಬಂದಿವೆಯೇ;

ಇ) ಹಾಗಿದ್ದಲ್ಲಿ, ತ್ಯಾಜ್ಯರಾಶಿಯನ್ನು ಮುಕ್ತವಾಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ನಗರದಲ್ಲಿ ಶೇಖರಿಸಲಾಗುವ ಕಸವನ್ನು ಎಲ್ಲಿಗೆ ಸಾಗಿಸಲಾಗುತ್ತದೆ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ಹೌದು. ಕಸದ ಸಮಸ್ಯೆಯಿಂದ ಸ್ಥಳೀಯರು ಅಸ್ವಸ್ಥರಾಗಿರುವ ಬಗ್ಗೆ ಮಾಧ್ಯಮದಲ್ಲಿ ವರದಿ ಬಂದಿರುತ್ತದೆ.

ಇ) ಬೆಂಗಳೂರು ನಗರದಲ್ಲಿ ಪ್ರತಿದಿನ ಸುಮಾರು 3500 ಟನ್ ಘನತ್ಯಾಜ್ಯ ಉತ್ಪಾದನೆ ಆಗುತ್ತಿದ್ದು, ಈ ತ್ಯಾಜ್ಯದ ಸಂಗ್ರಹಣೆ, ಬೀದಿ ಗುಡಿಸುವಿಕೆ, ಸಾಗಾಣಿಕೆ, ಸಂಸ್ಕರಣೆ ಹಾಗೂ ವಿಲೇವಾರಿಯನ್ನು ಪಾಲಿಕೆಯು ಪೌರ ಘನತ್ಯಾಜ್ಯ ನಿಯಮ, 2000 ರ ಅಡಿಯಲ್ಲಿ ನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ಸಂಗ್ರಹಿಸಿ, ಸಾಗಾಣಿಕೆ ಮಾಡಿ ಸೂಕ್ತ ರೀತಿಯಲ್ಲಿ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಪಾಲಿಕೆ ವತಿಯಿಂದ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಾಣಿಕೆಯಲ್ಲಿ ಯಾವುದೇ ರೀತಿಯ ಗಣನೀಯ ವ್ಯತ್ಯಾಸ

ಉಂಟಾಗದಂತೆ ಕೆಲಸ ನಿರ್ವಹಿಸಲಾಗುತ್ತಿದೆ. ರಸ್ತೆಗಳಲ್ಲಿ ಮತ್ತು ಮೈದಾನಗಳಲ್ಲಿ ಕಸದ ರಾಶಿ ತುಂಬದೇ ಇರುವಂತೆ ಪ್ರತಿ ದಿನ ವಿಲೇವಾರಿ ಕಾರ್ಯ ನಡೆಸಲಾಗುತ್ತಿದೆ.

ಪ್ರಸ್ತುತ ತ್ಯಾಜ್ಯವನ್ನು ಉತ್ಪಾದನಾ ಹಂತದಲ್ಲಿಯೇ ವಿಂಗಡಣೆ ಮಾಡಲು ಪ್ರೋತ್ಸಾಹಿಸಲು 175 ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಬಿ.ಬಿ.ಎಂ.ಪಿ. ಯಿಂದ ಸ್ಥಾಪಿಸಲಾಗಿದ್ದು, ಈ ಕೇಂದ್ರಗಳು ಕೇವಲ ಒಣ ತ್ಯಾಜ್ಯವನ್ನು ಮಾತ್ರ ವಾರ್ಡುಗಳಿಂದ ಸಂಗ್ರಹಿಸುತ್ತಿವೆ. ಬೃಹತ್ ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದನೆ ಮಾಡುವ ಹೋಟೇಲ್‌ಗಳು, ರೆಸ್ಟೋರೆಂಟ್‌ಗಳು, ಕಲ್ಯಾಣ ಮಂಟಪಗಳು ಹಾಗೂ ಅಪಾರ್ಟ್‌ಮೆಂಟ್‌ಗಳು ಒಂದು ವ್ಯವಸ್ಥೆಯನ್ನು ಮಾಡಿಕೊಂಡು ತಮ್ಮ ಹಂತದಲ್ಲಿಯೇ ತ್ಯಾಜ್ಯದ ನಿರ್ವಹಣೆ ಮಾಡಿಕೊಳ್ಳಲು ಅಥವಾ ಬಿ.ಬಿ.ಎಂ.ಪಿ.ಯಿಂದ ಗುರುತಿಸಲಾದ ಸರ್ವೀಸ್ ಪ್ರೊವೈಡರ್‌ಗಳಿಂದ ನಿರ್ವಹಿಸಿಕೊಳ್ಳಲು ಸೂಚನೆಗಳನ್ನು ನೀಡಲಾಗಿದೆ. ಕಟ್ಟಡ ಮತ್ತು ಭಗ್ನಾವಶೇಷ ತ್ಯಾಜ್ಯದ ವಿಲೇವಾರಿಗಾಗಿ 7 ಸ್ಥಳಗಳನ್ನು ಗುರುತಿಸಲಾಗಿದೆ. ಮಹಾನಗರ ಪಾಲಿಕೆಯ 13 ಸ್ಥಳಗಳಲ್ಲಿ ವಿಕೇಂದ್ರಿಕೃತ ಬಯೋಮಿಥಿನೇಶನ್ ಘಟಕಗಳನ್ನು ಸ್ಥಾಪಿಸಲಾಗಿದ್ದು, ಅ ಪೈಕಿ 4 ಘಟಕಗಳು ಕಾರ್ಯಾರಂಭಿಸಿವೆ.

ತ್ಯಾಜ್ಯ ವಿಲೇವಾರಿಗಾಗಿ ಪಾಲಿಕೆವತಿಯಿಂದ ಘಟಕ ಸ್ಥಾಪಿಸಲು ಈ ಕೆಳಕಂಡ ಸ್ಥಳಗಳನ್ನು ಗುರುತಿಸಲಾಗಿದೆ.

1. ಕೆ.ಸಿ.ಡಿ.ಸಿ, ಕೂಡ್ಲೂ
2. ಎಂ.ಎಸ್.ಜಿ.ಪಿ, ದೊಡ್ಡಬಳ್ಳಾಪುರ
3. ಚಿಕ್ಕನಾಗಮಂಗಲ – ನಿರ್ಮಾಣ ಹಂತದಲ್ಲಿದೆ
4. ಸುಬ್ಬರಾಯನ ಪಾಳ್ಯ – ನಿರ್ಮಾಣ ಹಂತದಲ್ಲಿದೆ
5. ಲಿಂಗದೀರನಹಳ್ಳಿ – ನಿರ್ಮಾಣ ಹಂತದಲ್ಲಿದೆ

6. ದೊಡ್ಡ ಬಿದರಕಲ್ಲು – ನಿರ್ಮಾಣ ಹಂತದಲ್ಲಿದೆ

7. ಕನ್ನಹಳ್ಳಿ – ನಿರ್ಮಾಣ ಹಂತದಲ್ಲಿದೆ

8. ಸೀಗೆಹಳ್ಳಿ – ನಿರ್ಮಾಣ ಹಂತದಲ್ಲಿದೆ

9. ಹುಸಕೂರು (ಮಾಲ್ಟೋಸ್)

10. ಮಾವಳ್ಳಿಪುರ ಘಟಕವನ್ನು ಪುನರ್ ಆರಂಭಿಸಲಾಗಿದೆ

11. ವಿವಿಧ ವಾರ್ಡುಗಳಲ್ಲಿ 13 ಬೆಯೋಮಿಥಿನೇಶನ್ ಘಟಕಗಳು (4 ಘಟಕಗಳು ಕಾರ್ಯಾರಂಬಿಸಿವೆ)

12. ಕಟ್ಟಡ ಭಘ್ನಾವಶೇಷಗಳ ಸಂಸ್ಕರಣೆ / ವಿಲೇವಾರಿಗಾಗಿ 7 ಸ್ಥಳಗಳನ್ನು ಗುರುತಿಸಲಾಗಿದೆ. ಅವುಗಳು ಮಲ್ಲಸಂದ್ರ, ಕನ್ನೂರು, ಮಿಟಗಾನಹಳ್ಳಿ, ಗೊಳ್ಳಹಳ್ಳಿ, ಗುಡ್ಡದಹಳ್ಳಿ, ಶ್ರೀನಿವಾಸಪುರ ಕೋಗಿಲು, ಕಾಡುಅಗ್ರಹಾರ.

ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯವನ್ನು ಈ ಕೆಳಕಂಡ ಸ್ಥಳಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ.

ಕ್ರ.ಸಂ	ತ್ಯಾಜ್ಯ ಸಂಸ್ಕರಣೆ/ ವಿಲೇವಾರಿ ಘಟಕ	ಘಟಕದ ಸಾಮರ್ಥ್ಯ
1.	ಮೆ॥ ಟೆರ್ರಾ–ಫಾರ್ಮಾ	1000 ಟನ್ ಪ್ರತಿ ದಿನ
2.	ಮೆ॥ ಎಂ.ಎಸ್.ಜಿ.ಪಿ.	500 ಟನ್ ಪ್ರತಿ ದಿನ
3.	ಬಿಂಗಿಪೂರ	750 ಟನ್ ಪ್ರತಿ ದಿನ
4.	ಕೆ.ಸಿ.ಡಿ.ಸಿ.	300 ಟನ್ ಪ್ರತಿ ದಿನ
5.	ಮಾವಳ್ಳಿಪೂರ	100 ಟನ್ ಪ್ರತಿ ದಿನ
6.	ಲಕ್ಷ್ಮೀಪುರ	250 ಟನ್ ಪ್ರತಿ ದಿನ
7.	ಮೆ॥ ಮಾಲ್ಟೋಸ್	100 ಟನ್ ಪ್ರತಿ ದಿನ

ಮೇಲೆ ತಿಳಿಸಿದ ಘಟಕಗಳ ಪೈಕಿ ಬಿಂಗೀಪುರ ಮತ್ತು ಲಕ್ಷ್ಮೀಪುರ ಪ್ರದೇಶದಲ್ಲಿ ಸಂಸ್ಕರಿಸದೆ ವಿಲೇವಾರಿ ಮಾಡಲಾಗುತ್ತಿದ್ದು, ಹೊಸ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿದ ನಂತರ ಪೂರ್ಣ ಪ್ರಮಾಣದ ತ್ಯಾಜ್ಯವನ್ನು ಸಂಸ್ಕರಿಸಿ, ನಿರುಪಯುಕ್ತ ತ್ಯಾಜ್ಯಗಳನ್ನು ಮಾತ್ರ ಭೂಭರ್ತಿಮಾಡಲಾಗುವುದು. ಪ್ರಸ್ತುತ ಯಾವುದೇ ರೀತಿಯ ಸಂಕಷ್ಟ ಪರಿಸ್ಥಿತಿ ನಿರ್ಮಾಣವಾಗದಂತೆ ಅಗತ್ಯ ಕ್ರಮ ವಹಿಸಲಾಗುತ್ತಿದೆ.

ಮುಂದುವರೆದಂತೆ, ಈ ಕೆಳಕಂಡ 3 ಸ್ಥಳಗಳಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ಘಟಕಗಳಿಗೆ ಅನುಮೋದನೆ ನೀಡಿದ್ದು, ಇನ್ನು 2 ವರ್ಷದೊಳಗೆ ಸದರಿ ಘಟಕಗಳು ಪೂರ್ಣಗೊಳ್ಳುವುದು.

1. ಸತಾರೆಂ ಘಟಕ, ಮಾಗಡಿ – 1000 ಟನ್ ಪ್ರತಿದಿನ
2. ಎಸ್ಸೆಲ್ ಘಟಕ, ಗಿಡ್ಡೆನಹಳ್ಳಿ – 600 ಟನ್ ಪ್ರತಿದಿನ
3. ಆರ್ಗ್ಯಾನಿಕ್ ವೆಸ್ಟ್ ಇಂಡಿಯಾ, ಕೋಗಿಲು/ಕಟ್ಟಗೇನಹಳ್ಳಿ – ಯಲಹಂಕ –600 ಟನ್ ಪ್ರತಿದಿನ

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ಬೆಂಗಳೂರು ಕಸ ವಿಲೇವಾರಿ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಮಂಡೂರಿನಲ್ಲಿ ಹೋರಾಟವಾಗಿ ಅಲ್ಲಿ ಕಸ ನಿಲ್ಲಿಸಿದ ಮೇಲೆ ನಮ್ಮೆಲ್ಲ ಕಂಟ್ರಾಕ್ಟರ್‌ಗಳು ಕಸ ಗುಡಿಸುವವರಿಗೆ ಬೆಂಕಿಪೊಟ್ಟಣ ಕೊಟ್ಟಿದ್ದಾರೆ. ಅವರು ಜೇಬಿನಲ್ಲಿ ಬೆಂಕಿಪೊಟ್ಟಣ ಇಟ್ಟುಕೊಂಡಿರುತ್ತಾರೆ, ಎಲ್ಲೆಲ್ಲಿ ಮರದ ತರಗು ಬಿದ್ದಿರುತ್ತದೆ, ಆ ಕಸ ಗುಡ್ಡೆ ಮಾಡಿದ್ದಾರೆ, ಅಲ್ಲಿ ಬೆಂಕಿ ಹಚ್ಚಿಬಿಟ್ಟು ಹೋಗುತ್ತಾರೆ. ನೀವು ಬೇಕಾದರೆ ನೋಡಿ. ಇದು ಎಲ್ಲಾ common ಆಗಿಬಿಟ್ಟಿದ್ದು, ಆ ರೀತಿ ಮಾಡುತ್ತಿದ್ದಾರೆ. ದಯವಿಟ್ಟು ಅದನ್ನು ನಿಲ್ಲಿಸಬೇಕು.

ಎರಡನೆಯದಾಗಿ ತಾವು ಪ್ರಯಾಣ ಮಾಡುತ್ತೀರುತ್ತೀರಿ, ಎಲ್ಲಾ underpass ನೋಡಿ. ನೀವು ಮಹಾರಾಣಿ ಕಾಲೇಜಿನ ಹತ್ತಿರವಿರುವಂತಹ underpassಗೆ ಒಂದು ಬಾರಿ ಹೋಗಿ. ಆಮೇಲೆ ನಾಯಂಡಹಳ್ಳಿ junction

ನಿಂದ ಹಿಡಿದು ದಾಸರಹಳ್ಳಿವರೆಗೂ ಸುಮಾರು ಎಂಟು ಕಿಲೋಮೀಟರ್ ಇದೆ. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ನೀವು ಆ ರಸ್ತೆಯಲ್ಲಿ ಹೋಗಿ. ಕಸ ಎತ್ತಿ ಒಂದು ವರ್ಷವಾಗಿದೆ. ಕಾರ್ಪೋರೇಷನ್‌ನವರಿಗೆ ಈ ಭಾಗ ನಿಮಗೆ ಬರುತ್ತದೆಯೇ ಎಂದು ಕೇಳಿದರೆ ನಮಗೆ ಬರುವುದಿಲ್ಲವೆಂದು ಹೇಳುತ್ತಾರೆ. ಬಿ.ಡಿ.ಎ.ನವರನ್ನು ಕೇಳಿದರೆ, ಅವರು ನಾವು handover ಮಾಡಿದ್ದೇವೆ ಸಾರ್ ಎಂದು ಹೇಳುತ್ತಾರೆ. ಅದಕ್ಕೆ ಟೆಂಡರ್ ಕರೆದಿದ್ದಾರೆ ಎಂದು ಇಬ್ಬರೂ ಕರೆದಿಲ್ಲ. ನಾಯಂಡಳ್ಳಿ junction ನಿಂದ ಯಶವಂತಪುರ National Highway ವರೆಗೂ ಬರುವಂತಹ ರಸ್ತೆಯಲ್ಲಿ ಇದುವರೆಗೂ ಕಸ ಎತ್ತಿಲ್ಲ. ನಾನು ಇಬ್ಬರನ್ನೂ ಕೇಳಿದ್ದೇನೆ, ಅವರಿಬ್ಬರೂ ನನಗೆ ಬರಲ್ಲ, ನನಗೆ ಬರಲ್ಲ ಎಂದು ಹೇಳುತ್ತಾರೆ. ಇಬ್ಬರೂ ಟೆಂಡರ್ ಕರೆದಿಲ್ಲ, ಕಂಟ್ರಾಕ್ಟರನ್ನು ಕರೆದು ಕೇಳಿದರೆ ಇದು ನಮಗೆ ಬರುವುದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ದಯವಿಟ್ಟು ತಾವು ಸೂಚನೆಗಳನ್ನು ಕೊಡಬೇಕು.

ಮೂರನೆಯದಾಗಿ ಬಹಳ ಮುಖ್ಯವಾಗಿ ಮಂಡೂರಿನಲ್ಲಿ ಕಸ ವಿಲೇವಾರಿ ಮಾಡುವುದು ನಿಂತ ಮೇಲೆ ಬೇರೆ ಬೇರೆ ಹಳ್ಳಿಗಳಲ್ಲಿ ಕಸ ಹಾಕುವಂತಹ plant ಮಾಡುವುದಕ್ಕೆ ತಾವು ಮನಸ್ಸು ಮಾಡಿದ್ದೀರಿ. ಈಗ ಅಲ್ಲೆಲ್ಲ ಹೋರಾಟ ಮಾಡುತ್ತಿದ್ದಾರೆ. ಈ plant ಮಾಡುವುದಕ್ಕೆ ಮಾಗಡಿ, ಗಿಡ್ಡೇನಹಳ್ಳಿ, ಕೋಗಿಲೆ ಇರಬಹುದು, ಇಲ್ಲೆಲ್ಲಾ ಕಡೆ ತೊಂದರೆಯಾಗುತ್ತಿದೆ. ಈ ರೀತಿಯಾದರೆ ಮುಂದೆ ಸಮಸ್ಯೆಗಳಾಗುತ್ತದೆ. ಅದರ ಬಗ್ಗೆ ತಾವು ದಯವಿಟ್ಟು ಗಮನಹರಿಸಬೇಕು.

ಶ್ರೀ ಸಿದ್ದರಾಮಯ್ಯ:– ಎಲ್ಲಾ ವಿರೋಧ ಮಾಡುತ್ತಾರಲ್ಲ, ಅದಕ್ಕೆ ಏನು ಮಾಡಬೇಕೆಂದು ಹೇಳಿ.

ಶ್ರೀ ಆರ್. ಅಶೋಕ್:– ತಾವು ಮುಖ್ಯಮಂತ್ರಿಗಳು, ನಮ್ಮ ಕತೆ ಮುಗಿದುಹೋಗಿದೆ. ನಾವು ಇಲ್ಲಿ ಬಂದು ವಾಪಸ್ಸು ಕುಳಿತಿದ್ದೇವೆ. ತಾವು ಮುಖ್ಯಮಂತ್ರಿಗಳು ತಾವು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ:– ನಾನು ತಮ್ಮ ಅಭಿಪ್ರಾಯ ಕೇಳುತ್ತಿದ್ದೇನೆ. ನೀವು ಅಲ್ಲಿ incharge Minister ಆಗಿದ್ದಿರಿ. ನಿಮ್ಮ ಕಾಲದಲ್ಲಿ ಕಸವನ್ನು ಮಂಡೂರಿನಲ್ಲಿ ಕಸ ಹಾಕುವುದಕ್ಕೆ ಪ್ರಾರಂಭವಾಗಿದ್ದು, ಅದಕ್ಕೆ ನಿಮ್ಮ ಸಲಹೆಗಳನ್ನು ಕೊಡಿ ಎಂದು ಹೇಳಿದೆ. ಇವರು ಎಲ್ಲಾ ಕಡೆ ಕಸವನ್ನು ಗುಡ್ಡೆ ಹಾಕಿ ಸುಟ್ಟು ಹಾಕುತ್ತಾರೆಂದು ಹೇಳುತ್ತಿದ್ದಾರೆ. ಆ ರೀತಿ ಮಾಡುತ್ತಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಅದರ ಬಗ್ಗೆ ಇನ್ನೊಂದು ಬಾರಿ ಕೇಳಿ, ಆ ರೀತಿ ಮಾಡುತ್ತಿದ್ದರೆ, ಅದನ್ನು ನಿಲ್ಲಿಸುವಂತಹ ಕೆಲಸವನ್ನು ಮಾಡೋಣ. ಆ ಕಸವನ್ನು ವಿಲೇವಾರಿ ಮಾಡಿ ಅದನ್ನು ಸಂಸ್ಕರಣ ಮಾಡುವಂತಹ ಕೆಲಸವನ್ನು ಮಾಡೋಣ. ಇದು ಒಂದು ವಿಚಾರ.

ಎರಡನೆಯದಾಗಿ ನಾವು ಬಂದ ಮೇಲೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮಂಡೂರಿನಲ್ಲಿ ಕಸ ವಿಲೇವಾರಿ ಮಾಡುತ್ತಿದ್ದರಿಂದ ದೊಡ್ಡ ಗಲಾಟೆಯಾಗಿ ಅದನ್ನು ನಿಲ್ಲಿಸಿರುವುದು ತಮಗೆ ಗೊತ್ತಿದೆ, ಅಲ್ಲಿ ಬಹಳ ದೊಡ್ಡದಿತ್ತು, ಅಲ್ಲಿ ಇರುವಂತಹ ರೀತಿಯಲ್ಲಿಯೇ ಮಾಡಬೇಕು. ಪ್ರತಿದಿನ ಮೂರುವರೆ ಸಾವಿರ ಮೆಟ್ರಿಕ್ ಟನ್ ಕಸ ಉತ್ಪಾದನೆಯಾಗುತ್ತದೆ. ಅಷ್ಟನ್ನು ಕೂಡ ಇವತ್ತು ವಿಲೇವಾರಿ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಂಡಿರಲಿಲ್ಲ. ಕೆಲವು ಕಡೆ land fill ಮಾಡುತ್ತಿದ್ದರು, processing unitಗಳನ್ನು ಹಾಕಿರಲಿಲ್ಲ. ಈಗ ನಾವು ಬಂದ ಮೇಲೆ processing unitಗಳನ್ನು ಹಾಕುತ್ತಿದ್ದೇವೆ. ಸುಮಾರು 2,000 ಮೆಟ್ರಿಕ್ ಟನ್ processing unitನಲ್ಲಿ ಹಾಕುತ್ತಿದ್ದೇವೆ. ಇನ್ನು 1,000 ಮೆಟ್ರಿಕ್ ಟನ್ ಮಾತ್ರ land fillingನಲ್ಲಿ ಹೋಗುತ್ತಿದೆ. ಇದಕ್ಕೂ ಕೂಡ processing unitನಲ್ಲಿ ಹಾಕಬೇಕು ಎಂದಿದ್ದು, land filling ಮಾಡುವುದಕ್ಕೆ ಜನರು ಎಲ್ಲಾ ಕಡೆ ವಿರೋಧ ಮಾಡುತ್ತಿದ್ದಾರೆ. ಈಗ processing unit ಮಾಡುವುದಕ್ಕೆ ಕೂಡ ಜನ ವಿರೋಧ ಮಾಡುತ್ತಿದ್ದು, ನೀವು ಹೇಳಿದ ಹಾಗೆ ಮಾಗಡಿಯಲ್ಲಿ ಕೂಡ ವಿರೋಧ ಮಾಡುತ್ತಿದ್ದಾರೆ. ಅದರಿಂದ ಏನೂ ತೊಂದರೆ ಆಗುವುದಿಲ್ಲವೆಂದು ಹೇಳಿದರೂ ಕೂಡ ವಿರೋಧ ಮಾಡುತ್ತಿದ್ದಾರೆ. ನಾವು ಅವರ ಜೊತೆಯಲ್ಲಿ ಕರೆದು ಮಾತನಾಡಿದ್ದೇವೆ. ನಾನು ಎರಡು ಮೀಟಿಂಗ್ ಮಾಡಿದ್ದೇನೆ. ರೈತರನ್ನು

ಕರೆದು ಮಾತನಾಡಿದ್ದೇನೆ. ಜುನಾಯಿತ ಪ್ರತಿನಿಧಿಗಳನ್ನು ಕರೆದು ಮಾತನಾಡಿದ್ದೇನೆ. ಚೈನಾದಲ್ಲಿ ಇದೇ ರೀತಿಯ plant ಇದೆ, ನಿಮ್ಮನ್ನು ಬೇಕಾದರೆ ಅಲ್ಲಿಗೆ ಕಳುಹಿಸುತ್ತೇನೆ, ಅಲ್ಲಿ ಹೋಗಿ ನೋಡಿಕೊಂಡು ಬನ್ನಿ ಏನೂ ಆಗುವುದಿಲ್ಲವೆಂದು ಹೇಳಿದ್ದೇನೆ. ಈಗಾಗಲೇ ಸುಮಾರು ಏಳು ಕಡೆಗಳಲ್ಲಿ ಕಸ ವಿಲೇವಾರಿ ಮಾಡುತ್ತಾರೆ. ದೊಡ್ಡಬಳ್ಳಾಪುರದ ಟೆರ್ರಾ ಫಾರಂ ನಲ್ಲಿ 1,000 ಟನ್ processing ಆಗುತ್ತಿದೆ. ಎಂ.ಎಸ್.ಜಿ.ಪಿ ಯಲ್ಲಿ 500 ಮೆಟ್ರಿಕ್ ಟನ್ ವಿಲೇವಾರಿ ಆಗುತ್ತಿದೆ. ಬಿಂಗಿಪೂರದಲ್ಲಿ ಇನ್ನೂ 750 ಮೆಟ್ರಿಕ್ ಟನ್ land filling ನಡೆಯುತ್ತಿದೆ. ಕೆ.ಸಿ.ಡಿ.ಸಿ ಯಲ್ಲಿ ಪ್ರತಿದಿನ 300 ಟನ್ processing ಆಗುತ್ತಿದೆ. ಮಾವಳ್ಳಿಪುರದಲ್ಲಿ ಪ್ರತಿ ದಿವಸ 100 ಟನ್ processing ಆಗುತ್ತಿದೆ. ಲಕ್ಷ್ಮೀಪುರದಲ್ಲಿ ಪ್ರತಿ ದಿವಸ 250 ಟನ್ land filling ಆಗುತ್ತಿದೆ, ಇದು processing ಅಲ್ಲ. ಮಾಲ್ಟೋಸ್‌ನಲ್ಲಿ ಪ್ರತಿ ದಿವಸ 100 ಟನ್ processing ಆಗುತ್ತಿದೆ. ಒಟ್ಟು 2,000 ಮೆಟ್ರಿಕ್ ಟನ್ processing ಆಗುತ್ತಿದೆ. 1,000 ಮೆಟ್ರಿಕ್ ಟನ್ land fillingನಲ್ಲಿದೆ. ಇದನ್ನು ಕೂಡ ಮಾಡಬೇಕಾಗಿರುವಂಥದ್ದು, ನಾವು ಈಗ ಮೂರು ಕಡೆಗಳಲ್ಲಿ ಗುರುತಿಸಿದ್ದೇವೆ. ಅವುಗಳು ಸತಾರೆಂ ಘಟಕ, ಮಾಗಡಿ ಇಲ್ಲಿ 1,000 ಟನ್ ಮಾಡಬೇಕು, ಅಲ್ಲಿ ಕಸ ಸಂಸ್ಕರಣೆ ಮಾಡಿ ವಿದ್ಯುತ್ ಉತ್ಪಾದನೆ ಮಾಡಬೇಕು. ಎಸ್ಸೆಲ್ ಘಟಕ, ಗಿಡ್ಡೆನಹಳ್ಳಿ ಇಲ್ಲಿ 600 ಟನ್, ಆರ್ಗ್ಯಾನಿಕ್ ವೆಸ್ಟ್ ಇಂಡಿಯಾ ಇದರಲ್ಲಿ 600 ಟನ್ ಇದ್ದು, ಇದಿಷ್ಟು ಆದರೆ, ಈಗ ನಾವು ಪ್ರಾರಂಭ ಮಾಡಿರುವಂಥ ಆರು ಕಡೆಗಳಲ್ಲಿ ಕೆಲಸ ನಡೆಯುತ್ತಿದೆ. ಇವೆಲ್ಲಾ ಆದರೆ ಇನ್ನೂ 10 ವರ್ಷಗಳವರೆಗೆ ಕಸ ವಿಲೇವಾರಿ ಸಮಸ್ಯೆ ಬಗೆಹರಿಯುವಂಥಾದ್ದನ್ನು ಮಾಡುತ್ತಿದ್ದೇವೆ. ಈ ಮೂರು ಘಟಕಗಳು ಆಗಬೇಕಾದರೆ ಇನ್ನು 2 ವರ್ಷಗಳಾಗಬೇಕು. ಇನ್ನು ಉಳಿದದ್ದು ಪ್ರಾರಂಭವಾಗಿರುವಂಥದ್ದು 3 ತಿಂಗಳು, 4 ತಿಂಗಳುಗಳಲ್ಲಿ ಆಗುತ್ತವೆ. ಆಗ ಈ ಕಸ ವಿಲೇವಾರಿ ಸಮಸ್ಯೆ ಸ್ವಲ್ಪಮಟ್ಟಿಗೆ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಒಬ್ಬ ವಿಶೇಷ ಅಧಿಕಾರಿಯನ್ನು ಅಲ್ಲಿಗೆ ಹಾಕಿ, ಈ ಕಸ ವಿಲೇವಾರಿಗೋಸ್ಕರವೇ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೇವೆ.

ಇದು ನಡೆಯುತ್ತಿದೆ, ತಾವು ಇನ್ನು ಏನಾದರೂ ಸಲಹೆಗಳಿದ್ದರೆ ಕೊಡಿ, ತಾವು ಶಾಸಕರಾಗಿದ್ದೀರಿ, ಸಲಹೆಗಳನ್ನು ಕೊಡಿ, ನಾನು ಅದನ್ನು ಸೇರಿಸಿ ಕೊಡುತ್ತೇನೆ.

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಯವರೆ, ಬೆಂಗಳೂರು ನಗರದ ಎಲ್ಲಾ ಶಾಸಕರನ್ನು ಒಂದು ಸಾರಿ ಸಭೆ ಕರೆದು, ಅವರೊಂದಿಗೆ ಸಮಾಲೋಚನೆ ಮಾಡಿ.

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ನನ್ನದು ಒಂದೇ ಒಂದು suggestion. ಏನೆಂದರೆ, ನಾನು ಈಗಾಗಲೇ ಹೇಳಿದಂತೆ ring roadಗೆ ಟೆಂಡರ್ ಕರೆದಿಲ್ಲ, ಆ ಬಗ್ಗೆ ಉತ್ತರ ಕೊಡಬೇಕು, ಮತ್ತೆ ತಾವು ಕಸ ವಿಲೇವಾರಿ ಬಗ್ಗೆ ಏನು ಮಾಡುತ್ತಿದ್ದೀರಿ. ಇದಕ್ಕೆ ಕಾರ್ಪೊರೇಷನ್ ಕೈಯಲ್ಲಿ ಶಕ್ತಿ ಇಲ್ಲ, ಏಕೆಂದರೆ ಅವರಿಗೆ ಅಷ್ಟು strength ಇಲ್ಲ, ಅವರಿಗೆ ಅಷ್ಟು appointments ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ, restrictions ಇವೆ. ಆದ್ದರಿಂದ ಕಾರ್ಪೊರೇಷನ್‌ಗೆ ಕಸ ವಿಲೇವಾರಿಯ ಬಗ್ಗೆ long term processಗೆ ಬೇರೆ grant ಕೊಡದಿದ್ದರೂ ಪರವಾಗಿಲ್ಲ, ಇದಕ್ಕೆ ವಿಶೇಷ ಅನುದಾನ ಕೊಟ್ಟು, ಇದನ್ನು ತರುವಂಥ ಪ್ರಯತ್ನ ಮಾಡಬೇಕು.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಕಸ ವಿಲೇವಾರಿಗೋಸ್ಕರವೇ 250 ಕೋಟಿ ರೂ.ಗಳನ್ನು ಕೊಟ್ಟಿದ್ದೇನೆ. ತಾವು ಬೆಂಕಿ ಹಾಕುವುದರ ಬಗ್ಗೆ ಹೇಳಿದ್ದೀರಲ್ಲಾ, ಅದು ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಆರ್. ಅಶೋಕ್:– 100% ಇದೆ, ನಾನೇ ದಾರಿಯಲ್ಲಿ ನೂರು ಕಡೆಗಳಲ್ಲಿ ನೋಡಿದ್ದೇನೆ.

ಅಧ್ಯಕ್ಷರು:– ಆಯಿತು.

ಶ್ರೀ ಸಿದ್ದರಾಮಯ್ಯ:– ಆ ರೀತಿ ಏನಾದರೂ ಇದ್ದರೆ ನಾನು I will issue strict instructions. Burn ಮಾಡಬಾರದೆಂದು strict instructions ಕೊಡುತ್ತೇನೆ.

ಶ್ರೀ ಆರ್. ಅಶೋಕ್:– ಯಾರ್ಯಾರು ಕಸ ಗುಡಿಸುತ್ತಾರೋ ಅವರೆಲ್ಲರೂ ಬೆಂಕಿಪಟ್ಟಣವನ್ನು ಇಟ್ಟುಕೊಂಡಿರುತ್ತಾರೆ. ನಾನು ಮೂರು ದಿವಸಗಳ ಹಿಂದೆ ಎಡಿಯೂರು ಹತ್ತಿರ ದಾರಿಯಲ್ಲಿ ಅವರನ್ನು ನಿಲ್ಲಿಸಿ ಬೆಂಕಿಪಟ್ಟಣವನ್ನು ಕಿತ್ತುಕೊಂಡಿದ್ದೇನೆ.

ಅಧ್ಯಕ್ಷರು:– ಆಯಿತು.

ಶ್ರೀ ಡಿ.ಜಿ. ಶಾಂತನಗೌಡ:– ಚಳಿಗೋಸ್ಕರ ಏನಾದರೂ ಬೆಂಕಿ ಹಾಕಿಕೊಂಡಿದ್ದರೋ ಏನೋ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ಅಶೋಕ್‌ರವರನ್ನು ಏನಾದರೂ ಸಲಹೆ ಕೊಡಿ ಎಂದು ಹೇಳಿದರೆ ಬೆಂಕಿಪಟ್ಟಣ ಇಟ್ಟುಕೊಂಡಿದ್ದರೆಂದು ಹೇಳುತ್ತಾರೆ.

ಅಧ್ಯಕ್ಷರು:– ಮಾನ್ಯ ಅಶೋಕ್‌ರವರೆ, ತಾವು ಪ್ರಶ್ನೆ ಕೇಳಿ.

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ನಾನು ಇದನ್ನು ತಡೆಗಟ್ಟಿ ಎಂದು ಹೇಳುತ್ತಿದ್ದೇನೆ, ಅದನ್ನೇ ನಾನು ಸಲಹೆ ಎಂದು ಹೇಳುತ್ತಿದ್ದೇನೆ. ಅಧಿಕಾರಿಗಳಿಗೆ ಚುರುಕು ಮುಟ್ಟಿಸಿ, ಅದನ್ನು ಬಿಟ್ಟರೆ ಇದರಲ್ಲಿ ಬೇರೆ ಏನು ಇಲ್ಲ.

ಅಧ್ಯಕ್ಷರು:– very good, ಆಯಿತು ಬಿಡಿ.

ಶ್ರೀ ಸಿದ್ದಾರಾಮಯ್ಯ:– ಮಾನ್ಯ ಅಧ್ಯಕ್ಷರೆ, we are at it. ನಾವು ಮಾಡುತ್ತೇವೆ, ಇನ್ನು ಮೂರ್ನಾಕು ತಿಂಗಳಲ್ಲಿ ಈ ಸಮಸ್ಯೆ ಬಗೆಹರಿಸುತ್ತೇವೆ, ನೀವು ಬಿಟ್ಟು ಹೋಗಿದ್ದನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ನಾವು ಬಿಟ್ಟು ಹೋಗಿಲ್ಲ, ನೀವು ನಮ್ಮ ಮೇಲೆ 30 ವರ್ಷಗಳು ಬಿಟ್ಟು ಹೋಗಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಶೋಕ್‌ರವರೆ, ನಮ್ಮ ಕಾಲದಲ್ಲಿ Garden city ಎನ್ನುತ್ತಿದ್ದರು. Garden cityಯನ್ನು you have converted into Garbage city.

ಶ್ರೀ ಆರ್. ಅಶೋಕ್:– ಅದನ್ನು ಕಾಂಗ್ರೆಸ್ ಮಾಡಿದ್ದು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನಿಮ್ಮ ಕಾಲದಲ್ಲಿ ಆಗಿದ್ದು.

(ಗೊಂದಲ)

ಅಧ್ಯಕ್ಷರು:– ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

ಶ್ರೀ ಆರ್. ಅಶೋಕ್:– ನೀವೇ 30 ವರ್ಷಗಳು ಬಿಟ್ಟು ಹೋಗಿದ್ದು.

ಅಧ್ಯಕ್ಷರು:– ಏನು ಇದು? ದಯವಿಟ್ಟು please resume, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು, ಮಾನ್ಯ ಮಂತ್ರಿಗಳೆ ಹೇಳಿ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ,

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 6ನೇ ಪಟ್ಟಿಯಲ್ಲಿರುವ 230 ಪ್ರಶ್ನೆಗಳ ಪೈಕಿ 203 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

ಅನುಬಂಧ–1

ಅಧ್ಯಕ್ಷರು:– ಈಗ ಶೂನ್ಯವೇಳೆ, ಮಾನ್ಯ ಜಗದೀಶ್ ಶೆಟ್ಟರ್‌ರವರೆ ಹೇಳಿ.